೪. **ಪ್ರಾಪಂಚಿಕ ಸುಖದ ತ್ಯಾಗ:** ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುವ ಭಕ್ತನ ಇನ್ನೊಂದು ಲಕ್ಷಣವೆಂದರೆ, **'ಅನಪೇಕ್ಷ:'** ಎನ್ನುವುದು. 'ಯಾವುದಕ್ಕೂ ಅಪೇಕ್ಷೆ ಪಡದವನು' ಎಂದು ಇದರ ಅರ್ಥ. ರಾವಣನ ಹತ್ಯೆಯಾದ ನಂತರ, ವಿಭೀಷಣನು ಲಂಕೆಯ ರಾಜನಾಗಲು ಒಪ್ಪಲಿಲ್ಲ. ಅವನು ಹೀಗೆ ಹೇಳುತ್ತಾನೆ: "ರಾಮ, ನಿನ್ನನ್ನು ನಾನು ನೋಡಿದೆ. ನನಗೆ ಇನ್ನು ರಾಜ್ಯವೇಕೆ?" ಎಂದು. ಅನಂತರ ರಾಮನ ಒತ್ತಾಯಕ್ಕೆ ಮಣಿದು ಅವನು ರಾಜನಾಗುತ್ತಾನೆ.

ಭಕ್ತನಾದವನು ಹೇಗಿರುತ್ತಾನೆ ಎನ್ನುವುದಕ್ಕೆ ಶ್ರೀರಾಮಕೃಷ್ಣರು ಹನುಮಂತನ ಉದಾಹರಣೆಯನ್ನು ಕೊಡುತ್ತಾರೆ. ಅವರು ಹೀಗೆ ಹೇಳುತ್ತಾರೆ: ಹನುಮಂತನ ಮನಸ್ಸು ಹೇಗಿತ್ತು, ನೋಡಿ. ಅವನಿಗೆ ಹಣ ಬೇಕಾಗಿರಲಿಲ್ಲ, ಕೀರ್ತಿ ಬೇಕಾಗಿರಲಿಲ್ಲ. ಸಂಸಾರದ ಯಾವ ಸುಖಗಳೂ ಬೇಕಾಗಿರಲಿಲ್ಲ. ಇವನಿಗೆ ದೇವರು ಮಾತ್ರ ಬೇಕಾಗಿತ್ತು. ಲಂಕೆಯಲ್ಲಿ ಅವನು ಸ್ಫಟಿಕ ಕಂಬದಲ್ಲಿದ್ದ ಇಂದ್ರ ಧನುಸ್ಸನ್ನು ತೆಗೆದುಕೊಂಡು ಹೊರಟಿದ್ದ. ಆಗ ಮಂಡೋದರಿ ಕೆಲವು ಹಣ್ಣುಗಳನ್ನು ಅವನ ಎದುರಿಗೆ ಇಟ್ಟಳು. ಅವನು ಮರದಿಂದ ಇಳಿದು ಬಂದು ಆ ಶಸ್ತ್ರವನ್ನು ಕೆಳಗೆ ಬಿಡಲಿ ಎಂದು ಅವಳ ಇಚ್ಛೆ. ಆದರೆ ಹನುಮಂತ ಹಣ್ಣುಗಳ ಆಸೆಗೆ ಒಳಗಾಗಲಿಲ್ಲ. ಮಂಡೋದರಿ ಮತ್ತೆ ಮತ್ತೆ ಹಣ್ಣುಗಳ ಆಸೆ ತೋರಿಸುತ್ತಾಳೆ. ಆಗ ಅವನು ಈ ಹಾಡನ್ನು ಹೇಳುತ್ತಾನೆ:

> **ಯಾವ ಫಲ ಬೇಕು ಎನಗೆ, ಜನ್ಮ ಸಫಲವ ಗೈವ ಫಲವಿರಲು ಸುಮ್ಮನೆ**
> **ಮೋಕ್ಷಫಲಗಳ ಬಿಡುವ ಶ್ರೀರಾಮತರುವಿಹದು ಎನ್ನ ಎದೆಯೊಳಗೆ**
> **ಶ್ರೀರಾಮಕಲ್ಪತರುಮೂಲದಲಿ ನಾ ಕುಳಿತು, ಬೇಕಾದ ಫಲಗಳನು ಪಡೆಯುತಿರುವೆ**
> **ಪ್ರತಿಫಲವ ನಾ ಬಯಸೆ ಜಗದ ಕಹಿ ಫಲಗಳನು, ನಿಮ್ಮೊಂದಿಗೇ ಬಿಟ್ಟು ಮುನ್ನಡೆಯುವೆ**

೪. **ಭಕ್ತಿಯು ಅಹಂಕಾರದಿಂದ ನಷ್ಟವಾಗುತ್ತದೆ :** ಶ್ರೀಕೃಷ್ಣನು ಹೇಳುವ ಭಕ್ತನ ಲಕ್ಷಣಗಳಲ್ಲಿ **'ನಿರ್ಮಮೋ ನಿರಹಂಕಾರಃ'** ಎನ್ನುವುದೂ ಒಂದು. ಶ್ರೀರಾಮಕೃಷ್ಣರು ಅಹಂಕಾರದಲ್ಲಿ, 'ಅಪಕ್ವ ಅಹಂಕಾರ', 'ಪಕ್ವ ಅಹಂಕಾರ' ಎಂದು ಎರಡು ವಿಭಾಗಗಳನ್ನು ಮಾಡುತ್ತಾರೆ. ಸ್ವಲ್ಪವಾದರೂ ಅಹಂಕಾರವಿಲ್ಲದಿದ್ದರೆ, ಮನುಷ್ಯ ಜೀವಿಸಲಾರ. ಅಪಕ್ವ ಅಹಂಕಾರ ಎಂದರೆ, "ಏನು, ಇತರರಿಗೆ ನಾನು ಗೊತ್ತಿಲ್ಲವೇ, ನನಗೆ ಅಷ್ಟೊಂದು ಐಶ್ವರ್ಯವಿದೆ! ನನ್ನಷ್ಟು ಐಶ್ವರ್ಯವಂತರು ಯಾರು? ನನ್ನನ್ನು ಮೀರಿಸುವವರು ಯಾರು?" ಎಂಬ ಭಾವನೆ. ಪಕ್ವ ಅಹಂಕಾರ ಎಂದರೆ, "ನಾನು ದೇವರ ಸೇವಕ" ಎಂದುಕೊಳ್ಳುವ ಭಾವನೆ. ಶ್ರೀರಾಮಕೃಷ್ಣರ ಪ್ರಕಾರ ಇದೇ ಭಕ್ತನ ಲಕ್ಷಣ. ಅಂತಹ ಭಕ್ತನು, "ಎಲ್ಲವೂ ನೀನೇ, ಭಗವಂತ" ಎನ್ನುವನು. ಅಹಂಕಾರದಲ್ಲಿ ಮುಳುಗಿರುವ ಅಜ್ಞಾನಿಗಳು, "ನಾನು", "ನಾನು" ಎನ್ನುವರು.

ನಾರದನಂತಹ ಮಹಾಭಕ್ತನಿಗೂ ಅಹಂಕಾರ ಬಂದಿತ್ತು ಎಂದು ಒಂದು ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಾರೆ: ಒಮ್ಮೆ ನಾರದನಿಗೆ ತನ್ನಂತಹ ಭಕ್ತ ಯಾರೂ ಇಲ್ಲ ಎಂಬ ಅಹಂಕಾರ ಬಂತು. ಅದನ್ನು ಅರಿತ ದೇವರು ಹೇಳಿದ, "ನಾರದರೇ, ಇಂಥ ಸ್ಥಳಕ್ಕೆ ಹೋಗಿ. ಅಲ್ಲಿ ನನ್ನ ಮಹಾಭಕ್ತನಿದ್ದಾನೆ. ಅವನ ಸ್ನೇಹವನ್ನು ಸಂಪಾದಿಸಿಕೊಳ್ಳಿ. ಅವನು ನನ್ನ ನಿಜವಾದ ಭಕ್ತ." ನಾರದರು ಆ ಸ್ಥಳಕ್ಕೆ ಹೋದರು. ಅದು ಒಬ್ಬ ಬೇಸಾಯಗಾರನ ಮನೆ. ಅವನು ಬೆಳಗ್ಗೆ ಅಷ್ಟುಹೊತ್ತಿಗೇ ಎದ್ದು ಹರಿನಾಮವನ್ನು ಒಮ್ಮೆ ಉಚ್ಚರಿಸಿ, ಅನಂತರ ಉಳುವುದಕ್ಕೆ ಹೋಗುತ್ತಿದ್ದ. ದಿನವೆಲ್ಲ ಬೇಸಾಯದ ಕೆಲಸದಲ್ಲಿ ನಿರತನಾಗಿರುತ್ತಿದ್ದ. ಅನಂತರ ರಾತ್ರಿ ಮತ್ತೊಂದು ಸಲ ಹರಿನಾಮವನ್ನು ಉಚ್ಚರಿಸಿ ಮಲಗಲು ಹೋಗುತ್ತಿದ್ದ. ಕೇವಲ ಬೇಸಾಯದಲ್ಲಿ ನಿರತನಾಗಿರುವ ಈ ರೈತನು ತನಗಿಂತ ಶ್ರೇಷ್ಠ ಭಕ್ತನಾಗಲು ಹೇಗೆ ಸಾಧ್ಯ ಎಂದು ನಾರದನು ವಿಷ್ಣುವಿನ ಹತ್ತಿರ ದೂರಿದನು. ಆಗ ವಿಷ್ಣುವು ಅವನಿಗೆ ಪೂರ್ತಿ ಎಣ್ಣೆ ತುಂಬಿದ ಬಟ್ಟಲನ್ನು ಕೊಟ್ಟು, ಅದನ್ನು ತಲೆಯ ಮೇಲೆ ಇಟ್ಟುಕೊಂಡು, ಇಡೀ ಊರನ್ನು ಸುತ್ತಿಬರಬೇಕು ಎಂದು ಹೇಳಿದನು. ಒಂದು ತೊಟ್ಟು ಎಣ್ಣೆ ಕೂಡ ಚೆಲ್ಲಬಾರದು ಎಂದು ಎಚ್ಚರಿಸಿದನು. ನಾರದನು ಹೀಗೆಯೇ ಮಾಡಿದನು. ಕಡೆಗೆ ವಿಷ್ಣುವು ಕೇಳಿದನು, "ನಾರದರೇ, ನನ್ನನ್ನು ಎಷ್ಟು ಸಲ ಸ್ಮರಿಸಿದಿರಿ?" ಎಂದು. ಅದಕ್ಕೆ ನಾರದರು, "ನನ್ನ ತಲೆಯ ಮೇಲೆ ಎಣ್ಣೆಯ ಪಾತ್ರೆ ಇತ್ತು. ಎಣ್ಣೆ ಎಲ್ಲಿ ಚೆಲ್ಲಿಹೋಗುವುದೋ ಎಂಬುದರ ಬಗ್ಗೆಯೇ ನನ್ನ ಗಮನವಿತ್ತು. ಹೀಗಾಗಿ ನಿನ್ನ ಸ್ಮರಣೆಯೇ ನನಗೆ ಬರಲಿಲ್ಲ" ಎಂದು ಹೇಳಿದನು. ಆಗ ದೇವರು ಅವನಿಗೆ ಹೇಳುತ್ತಾನೆ, "ಒಂದು ಎಣ್ಣೆ ಬಟ್ಟಲು ನಿನ್ನ ಮನಸ್ಸನ್ನು ಎಷ್ಟು ಕದಲಿಸಿತು ಎಂದರೆ, ನಿನಗೆ ನನ್ನನ್ನು ಚಿಂತಿಸುವುದಕ್ಕೇ ಆಗಲಿಲ್ಲ. ಆದರೆ ಆ ರೈತನು ಇಷ್ಟೊಂದು ಕೆಲಸದಲ್ಲಿ ತೊಡಗಿರುವಾಗಲೂ ಪ್ರತಿ ದಿನ ನನ್ನನ್ನು ಎರಡು ಸಲವಾದರೂ ಚಿಂತಿಸುತ್ತಿರುವನು." ಈ ಕಥೆ ಮುಗಿಸಿ ಶ್ರೀರಾಮಕೃಷ್ಣರು ಹೇಳುತ್ತಾರೆ, "ಅಹಂಕಾರವೆಂಬುದು ಭಕ್ತಿಯನ್ನು ಬಹುಬೇಗ ನಾಶಮಾಡುತ್ತದೆ. ಕಂಬಳಿಹುಳುಗಳು ಗಿಡದ ಹಸಿರು ಎಲೆಗಳನ್ನು ತಿಂದುಹಾಕುವಂತೆ ಅಹಂಕಾರವು ಭಕ್ತಿಯನ್ನು ನಾಶಮಾಡುತ್ತದೆ."

•

# ‘ಮಂಕುತಿಮ್ಮನ ಕಗ್ಗ’ದಲ್ಲಿ ತತ್ತ್ವ ವಿಚಾರ

ಮಂಕುತಿಮ್ಮನ ಕಗ್ಗ

ಪ್ರೊ. ಎಚ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಧೀಮಂತ ತತ್ತ್ವಕವಿ, ಪದ್ಮಭೂಷಣ ಡಾ. ಡಿ.ವಿ.ಗುಂಡಪ್ಪನವರ ಶ್ರೇಷ್ಠ ಕೃತಿ ‘ಮಂಕುತಿಮ್ಮನ ಕಗ್ಗ’. ನಾಲ್ಕು ಸಾಲುಗಳಿರುವ (ಚೌಪದಿ), ಆದಿಪ್ರಾಸದಲ್ಲಿ (ದ್ವಿತೀಯಾಕ್ಷರ ಪ್ರಾಸ), ಛಂದೋಬದ್ಧವಾಗಿ ಡಿ.ವಿ.ಜಿ ಅವರು ರಚಿಸಿರುವ ೯೪೫ ಮುಕ್ತಕಗಳ ಸಂಗ್ರಹವೇ ಈ ಕಗ್ಗ. ಯಾವುದೋ ಒಂದು ವಿಚಾರಕ್ಕೆ ಕೇಂದ್ರೀಕೃತವಾಗಿರುವ, ಹಿಂದಿನ ಅಥವಾ ಮುಂದಿನ ಪದ್ಯಕ್ಕೆ ನೇರ ಸಂಬಂಧವಿರದ ಸ್ವತಂತ್ರವಾದ ಚೌಪದಿಗೆ ‘ಮುಕ್ತಕ’ ಎಂದು ಕರೆಯುತ್ತಾರೆ.

> ಮಂಕುತಿಮ್ಮನ ಕಗ್ಗವು ಆಧುನಿಕ ಕನ್ನಡ ಸಾಹಿತ್ಯದ ಒಂದು ಜೀವನ ದರ್ಶನ ಗ್ರಂಥವೆಂದು ಪರಿಗಣಿತವಾಗಿದೆ. ಇದರಲ್ಲಿ ಬರುವ ಹಲವು ತಾತ್ತ್ವಿಕ ಅಂಶಗಳ ಸೋದಾಹರಣ ಪರಿಚಯವನ್ನು ಮಾಡಿರುವ ಲೇಖಕರು ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಪರಿಚಾರಕರು. ‘ಮಂಕುತಿಮ್ಮನ ಕಗ್ಗ’ದ ಬಗ್ಗೆ ೧೫೦೦ಕ್ಕೂ ಹೆಚ್ಚಿನ ಉಪನ್ಯಾಸಗಳನ್ನು ನೀಡಿದ್ದಾರೆ. ೨೦೦೨ ರ ಡಿ.ವಿ.ಜಿ. ಪ್ರಶಸ್ತಿಯನ್ನು ಕೂಡ ಪಡೆದಿದ್ದಾರೆ.

ಕಗ್ಗಕ್ಕೆ ಮುನ್ನುಡಿಯಂತಿರುವ ಕಾಲ್ಪನಿಕವಾದ ‘ಸೋಮಿಯ ಕಥೆ’ಯ ಅಂತ್ಯದಲ್ಲಿ ಡಿ.ವಿ.ಜಿ. ಅವರೇ ಸೂಚಿಸಿರುವಂತೆ ಈ ಮುಕ್ತಕಗಳನ್ನು ಜೋಡಿಸಿರುವ ಸೂತ್ರವೆಂದರೆ, **“ಬಾಳ್ಗೆ ಸಲುವ ತತ್ತ್ವ”**. ಇವುಗಳನ್ನು ಪಾಮರ ಜನರ ಮಾತಿನಲ್ಲಿ ಹೇಳಿರುವವನೇ ‘ತಿಮ್ಮಗುರು’ – ಆದರ್ಶ ಶಿಕ್ಷಕ. ಇವನೇ ತನ್ನನ್ನು ‘ಮಂಕುತಿಮ್ಮ’ ಎಂದು ಕರೆದುಕೊಂಡಿದ್ದಾನೆ. **ಏನು ಜೀವನದರ್ಥ? ಏನು ಜೀವ ಪ್ರಪಂಚಗಳ ಸಂಬಂಧ? ಜ್ಞಾನ ಪ್ರಮಾಣವೇಂ? ಬದುಕಿಗಾರ್ ನಾಯಕರು? ಧರೆಯ ಬದುಕೇನು? ಗುರಿ ಏನು? ಫಲವೇನು?** – ಇಂತಹ ಸಾವಿರಾರು ಪ್ರಶ್ನೆಗಳು ಎದುರಾಗಿ, ಬಿಡುಗಡೆಯ ದಾರಿ ಕಾಣದೆ ‘ಮಂಕು’ ಬಡಿದಂತಾಗಿದೆ ಎನ್ನುವ ತಿಮ್ಮಗುರುವು ಮಾಡುವ ತತ್ತ್ವ ವಿಚಾರ ಸರಣಿಯೇ ‘ಮಂಕುತಿಮ್ಮನ ಕಗ್ಗ’. ಇದನ್ನು ‘ಜೀವನ ಧರ್ಮದರ್ಶನ’ ಎಂದು ಹೆಸರಿಸಿದ್ದಾರೆ ಡಿ.ವಿ.ಜಿ.

**ವಿಶದಮಾದೊಂದು ಜೀವನ ಧರ್ಮದರ್ಶನವ**
**ನುಸಿರಿಕೊಳೆ ತನ್ನ ಮನಸಿಗೆ ತಾನೆ ಬಗೆದು**
**ನಿಸದವಂ ಗ್ರಂಥ ಅನುಭವಗಳಿಂದಾರಿಸುತ**
**ಹೊಸೆದನೀ ಕಗ್ಗವನು – ಮಂಕುತಿಮ್ಮ**

ಡಿ.ವಿ.ಜಿ. ಅವರು ೧೯೬೫ ರಲ್ಲಿ ಪ್ರಕಟಿಸಿರುವ ತಮ್ಮ ಕೃತಿ ‘ಶ್ರೀಮದ್ಭಗವದ್ಗೀತಾ ತಾತ್ಪರ್ಯ’ಕ್ಕೆ ‘ಜೀವನಧರ್ಮ ಯೋಗ’ ಎಂದೂ ಹೆಸರಿಸಿದ್ದಾರೆ. ‘ಜೀವನಧರ್ಮ’ ಎನ್ನುವ ನುಡಿಗಟ್ಟನ್ನು (೧೯೪೫ರಲ್ಲಿ ಪ್ರಕಟವಾದ ಕೃತಿ) ಪೂರ್ವಭಾವಿಯಾಗಿ ಮಂಕುತಿಮ್ಮನ ಕಗ್ಗಕ್ಕೂ ‘ಜೀವನ ಧರ್ಮದರ್ಶನ’ ಎಂದು ಬಳಸಿದ್ದಾರೆ. ಆದ್ದರಿಂದ ಮಂಕುತಿಮ್ಮನ ಕಗ್ಗವನ್ನು ‘ಕನ್ನಡದ ಭಗವದ್ಗೀತೆ’ ಎಂದು ಪರಿಗಣಿಸಲಾಗಿದೆ. ಕಗ್ಗದಲ್ಲಿ, ಚಿಂತನ ಮಂಥನಕ್ಕೆ ಒಳಪಟ್ಟಿರುವ ನೂರಾರು ತತ್ತ್ವಗಳನ್ನು ಒಂದು ಲೇಖನದಲ್ಲಿ ಪ್ರಸ್ತಾಪಿಸುವುದು ಕಷ್ಟಸಾಧ್ಯ. ಆದಕಾರಣ, ಕೆಲವಾರು ತತ್ತ್ವಗಳನ್ನು ಆದಷ್ಟು ಸಂಕ್ಷಿಪ್ತವಾಗಿ ಉದಹರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಮುಕ್ತಕಗಳನ್ನು ಮತ್ತೆ ಮತ್ತೆ ‘ಮನನ’ ಮಾಡುತ್ತಾ, ಚಪ್ಪರಿಸುತ್ತಾ, ಅನುಭವಿಸಿ, ಅನುಷ್ಠಾನಕ್ಕೆ ತರಲು ಯತ್ನಿಸಬಹುದೆಂದು ಓದುಗರಲ್ಲಿ ವಿನಂತಿ.

## ದೇವ ಮಂದಿರ, ಭಜನೆ

**ದೇವ ಮಂದಿರ ಭಜನೆ ಪೂಜೆ ಪ್ರಸಾದಗಳು**
**ಜೀವನದಲಂಕಾರ ಮನಸಿನುದ್ಧಾರ**
**ಭಾವವಂ ಕ್ಷುಲ್ಲ ಜಗದಿಂ ಬಿಡಿಸಿ ಮೇಲೊಯ್ವು**
**ದಾವುದಾದೊಡಮೊಳಿತು – ಮಂಕುತಿಮ್ಮ**

ದೇವಸ್ಥಾನಗಳಲ್ಲಿ, ಮನೆಗಳಲ್ಲಿ, ಪ್ರತಿನಿತ್ಯ ನಡೆಸುವ ಪೂಜೆ, ಭಜನೆ, ಪಡೆಯುವ ಪ್ರಸಾದ – ಇವುಗಳು ಜೀವನಕ್ಕೆ ಒಂದು ‘ಅಲಂಕಾರ’ವಿದ್ದಂತೆ, ಶೋಭೆ ತರುವಂಥವು. ಅಂತೆಯೇ, ಇವುಗಳಿಂದ ಮನಸ್ಸಿನ ಉದ್ಧಾರ, ಉತ್ಥಾನ. ನಮ್ಮ ಭಾವವನ್ನು ಕ್ಷುಲ್ಲಕವಾಗಿರುವ, ಅರ್ಥಹೀನವಾಗಿರುವ ಕ್ಷಣಿಕ ಜಗತ್ತಿನಿಂದ ಮೇಲಕ್ಕೆ, ಉನ್ನತ ಚಿಂತನೆಗೆ ಕರೆದುಕೊಂಡು ಹೋಗುವ (ಮೇಲೊಯ್ವುದು) ‘ಆವುದಾದೊಡಂ’ – ಇಂತಹ ಯಾವುದೇ ಸಂಸ್ಕಾರವಾದರೂ, ಅದು ಒಳಿತು–ಒಳ್ಳೆಯದು. ಅಂತಹ ದೈವಸಾನ್ನಿಧ್ಯದಲ್ಲಿ, ವಿಶೇಷವಾಗಿ ಶಕ್ತಿಸಂಚಯನವಾಗುತ್ತದೆ, ಮೋಕ್ಷದ ದಾರಿ ಸುಗಮವಾಗುತ್ತದೆ.

## ವರಯೋಗ ಸೂತ್ರ

**ಎರಡು ಕೋಣೆಗಳ ನೀಂ ಮಾಡು ಮನದಾಲಯದಿ**
**ಹೊರ ಕೋಣೆಯಲಿ ಲೋಗರಾಟಗಳನಾಡು**
**ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ**
**ವರಯೋಗ ಸೂತ್ರವಿದು – ಮಂಕುತಿಮ್ಮ**

ನಮ್ಮ ಮನವೆಂಬ ಆಲಯದಲ್ಲಿ, ಎರಡು ಪ್ರತ್ಯೇಕವಾದ ಕೋಣೆಗಳನ್ನು ಮಾಡಿಕೊಳ್ಳಬೇಕು. ಹೊರಗಿನ ಕೋಣೆಯಲ್ಲಿ 'ಲೋಗರಾಟ', ಲೋಕದ ಜನರ, ಬಂಧುಮಿತ್ರರ ಒಡನೆ ನಡೆಸಬೇಕಾದ ಜೀವನ – ಇದನ್ನು ಆಡಲೇಬೇಕಾಗಿದೆ – ನಡೆಸಬೇಕು (ಆಡು). ಆದರೆ, ಮೌನವಾಗಿರುವ, ಅಂದರೆ ಯಾವುದೇ ರಾಗದ್ವೇಷಗಳಿಗೆ, ಸುಖದುಃಖಗಳಿಗೆ ಒಳಪಡದೇ ಮುಕ್ತವಾಗಿರುವ ಒಳಮನೆಯಲ್ಲಿ, ಮತ್ತೊಂದು ಕೋಣೆಯಲ್ಲಿ, ಶಾಂತಿಯಿಂದ ಒಬ್ಬನೇ ವಿರಮಿಸಬೇಕು, ಯಾವ ಬಂಧನಗಳೂ ಇಲ್ಲದೆ ಮುಕ್ತನಾಗಿರಬೇಕು. ಹೊರಗೆ ಕಾರ್ಯಧ್ಯಾನ, ಒಳಗೆ ಉದಾಸೀನ – ಹೊರಗೆ ಸಂಸಾರ ಭಾರ, ಒಳಗದರ ತಾತ್ಸಾರ – You live in the world and let not the world live in you. ಕಮಲದ ಹೂವಿನ ಬಳ್ಳಿಯ ಎಲೆಯ ಮೇಲೆ, ಅಂಟದೆ ಓಡಾಡುವ ನೀರಿನ ಹನಿಯಂತೆ, ಈ ಜಗತ್ತಿನಲ್ಲಿ ಇದ್ದೂ ಇರದಂತೆ ಜೀವನವನ್ನು ನಡೆಸುವ (**ಪದ್ಮಪತ್ರಮಿವಾಂಭಸಿ**) ಈ ಬಾಳಸೂತ್ರವೇ, ನಮಗೆ ದೇವರಿಂದ ದೊರೆಯಬೇಕಾದ 'ವರ'.

## ಸಹನೆ ವಜ್ರದ ಕವಚ

**ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ**
**ವಿಹಿತವಾಗಿಹುದದರ ಗತಿ ಸೃಷ್ಟಿ ವಿಧಿಯಿಂ**
**ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ**
**ಸಹನೆ ವಜ್ರದ ಕವಚ – ಮಂಕುತಿಮ್ಮ**

ಗ್ರಹಗಳ ಚಲನೆಯ ರೀತಿಯನ್ನು (ಮಾರ್ಗವನ್ನು) ಒಬ್ಬ ವ್ಯಕ್ತಿಯ ಜಾತಕದಲ್ಲಿ, ಜೋಯಿಸನು ತಿದ್ದುವುದಕ್ಕಾಗುತ್ತದೆಯೇ? ಶನಿಕಾಟ, ರಾಹುಕೇತು ದೋಷ ಇತ್ಯಾದಿಗಳನ್ನು ಜ್ಯೋತಿಷಿ ನಮಗೆ ತಿಳಿಸಬಲ್ಲನೇ ಹೊರತು, ಆಯಾ ಗ್ರಹಗಳ ಚಲನೆಯನ್ನು ನಿಯಂತ್ರಿಸಿ, ನಿಮ್ಮ ಮನೆಗೆ ಬರದಂತೆ ತಡೆಯಲು ಅವನಿಗೆ ಸಾಧ್ಯವೇ? ಇದೇ 'ಗ್ರಹಚಾರ'. ಸೌರವ್ಯೂಹದಲ್ಲಿ ವಿವಿಧ ಗ್ರಹಗಳ ವೇಗ, ಚಲನೆಯ ದಿಕ್ಕು, ಪಥ ಇವುಗಳು ಸೃಷ್ಟಿಯ ನಿಯಮದಂತಿವೆ. ಅವನ್ನು ನಾವು ಬದಲಾಯಿಸಲು ಸಾಧ್ಯವಿಲ್ಲ. ತನ್ಮೂಲಕ ಆಗಬಹುದಾದ ಯಾವುದೇ ಪರಿಣಾಮಗಳನ್ನು (ದಶೆ) ಪ್ರತಿಯೊಬ್ಬರೂ ಅನುಭವಿಸಲೇಬೇಕಾಗಿದೆ ಮತ್ತು ಸಹಿಸಬೇಕಾಗಿದೆ. ಹೀಗಾಗಿ, ಬಂದದ್ದನ್ನೆಲ್ಲಾ ಸಹಿಸಿಕೊಳ್ಳುವುದೇ ನಮಗಿರುವ 'ಕವಚ'. 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆ ಇರಲಿ', 'ತಾಳಿದವನು ಬಾಳಿಯಾನು' – ಈ ಮಾತುಗಳೂ ಅದನ್ನೇ ಹೇಳುತ್ತವೆ. ಇದನ್ನೇ ಗೀತೆಯಲ್ಲಿ **'ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ'** – ಸುಖದುಃಖಗಳಲ್ಲಿ, ಜಯ–ಅಪಜಯಗಳಲ್ಲಿ, ಲಾಭ–ನಷ್ಟಗಳಲ್ಲಿ ಸಮಾನಭಾವದಿಂದ ಇರಬೇಕು ಎಂದು ಶ್ರೀಕೃಷ್ಣ ಉಪದೇಶಿಸಿದ್ದಾನೆ.

## ನಗಿಸಿ, ನಗುತ ಬಾಳುವ ವರ

**ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ**
**ನಗುವ ಕೇಳುತ ನಗುವುದತಿಶಯದ ಧರ್ಮ**
**ನಗುವ ನಗಿಸುವ ನಗಿಸಿ ನಗುತ ಬಾಳುವ ವರವ**
**ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ**

ಇಲ್ಲಿ 'ಧರ್ಮ' ಎಂದರೆ ಜೀವನವಿಧಾನ – ಜೀವನವನ್ನು ನಡೆಸಬೇಕಾದ ರೀತಿ. ನಗುವುದು ಎಂದರೆ, ಶಬ್ದ ಮಾಡುತ್ತಾ, ಅಪಹಾಸ್ಯ ಮಾಡುತ್ತಾ, ಅಟ್ಟಹಾಸ ಮಾಡುವುದು ಎಂಬ ಭಾವನೆ ಇಲ್ಲಿಲ್ಲ. ನಗುವುದು ಎಂದರೆ ಸಂತೋಷಪಡುವುದು, ಆನಂದಿಸುವುದು, ಸುಖಪಡುವುದು. ಇದು ಮನುಷ್ಯನ ಸಹಜವಾದ ಜೀವನಮಾರ್ಗ. ಬಂದ ಸುಖವನು ಬಿಡದೆ, ಬಾರದುದನು (ಬರಲಾಗದ) ಏಕೆ ಬಂದಿಲ್ಲ ಎನ್ನದೆ ಜೀವನ ನಡೆಸುವುದು. ತಿಳಿಹಾಸ್ಯದ ಲೇಪನದಿಂದ ಜೀವನಯಂತ್ರದೊಳಗಿನ ಸಂಘರ್ಷ (Friction) ಕಡಮೆಯಾಗುತ್ತದೆ. **ನಗಿಸುವುದು** – ಇನ್ನೊಬ್ಬರನ್ನು ಸಂತೋಷಪಡಿಸುವುದು, ಪರಧರ್ಮ – ಅಂದರೆ ಹೆಚ್ಚಿನ ಧರ್ಮ. **'ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರಪೂಜನಂ'** – "ನಾನೊಬ್ಬನೇ ಸಂತೋಷಪಟ್ಟರೆ, ಸುಖಪಟ್ಟರೆ ಸಾಲದು; ಮತ್ತೊಬ್ಬರನ್ನು ಕೂಡ ನಾನು ಸಂತೋಷಪಡಿಸಬೇಕು; ಸಂಗೀತ, ನರ್ತನ, ಒಳ್ಳೆಯ ಮಾತು, ಊಟ, ತಿಂಡಿ, ಮುಂತಾದವುಗಳಿಂದ ಬಂಧುಮಿತ್ರರನ್ನು, ಸಾರ್ವಜನಿಕರನ್ನು

ಸಂತೋಷಪಡಿಸುವುದು ಲೋಕದ ನೀತಿ. **ನಗುವ ಕೇಳುತ ನಗುವುದು** ಅಂದರೆ, ಸಂತೋಷದಲ್ಲಿರುವವರನ್ನು ಕಂಡು ಅಸೂಯೆಪಡದೆ ನಾವೂ ಅದರಲ್ಲಿ ಭಾಗಿಗಳಾಗುವುದು, **ಅತಿಶಯದ ಧರ್ಮ**, ಶ್ರೇಷ್ಠವಾದ ಧರ್ಮ" – ಇದುವೇ ಡಿ.ವಿ.ಜಿ. ಅವರು ಹಾಕಿಕೊಡುವ ಜೀವನವಿಧಾನ. ಅಂದರೆ, ಬದುಕಿನಲ್ಲಿ ಸಂತೋಷಪಡುವ, ಸಂತೋಷಪಡಿಸುವ, ಸಂತೋಷ ದಲ್ಲಿರುವವರನ್ನು ಕಂಡು ಕರುಬದೇ ಸಂತೋಷಪಡುವ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕು.

### ವಿಜ್ಞಾನ ಕಲೆ ಮೇಳವಿಸೆ ಜಸ

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು**
**ಹೊಸ ಯುಕ್ತಿ ಹಳೆ ತತ್ತ್ವದೊಡಗೂಡೆ ಧರ್ಮ**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ**
**ಜಸವು ಜನಜೀವನಕೆ – ಮಂಕುತಿಮ್ಮ**

ಒಂದು ಮರ ಫಲಪುಷ್ಪಗಳಿಂದ ಕಂಗೊಳಿಸುತ್ತಾ ಮನಮೋಹಕವಾಗಿ ಕಾಣಿಸಲು ಕಾರಣ ಅದರಲ್ಲಿ ಮೂಡುವ ಹೊಸ ಚಿಗುರು ಮತ್ತು ಅದಕ್ಕೆ ಆಧಾರವಾದ ಬೇರು. ತಾಯಿಬೇರು ಆಳಕ್ಕೆ ಇಳಿಯದಿದ್ದರೆ, ಅದರಿಂದ ಭದ್ರತೆ ಸಿಗದಿದ್ದರೆ, ಮರವು ಹೆಚ್ಚು ಕಾಲ ಇರುವಂತಿಲ್ಲ, ಚಿಗುರುವಂತಿಲ್ಲ. ಅಂದರೆ ಪ್ರತಿ ವ್ಯಕ್ತಿಯ, ಸಮಾಜದ, ರಾಷ್ಟ್ರದ ವಿಕಾಸವಾಗಬೇಕಾದರೆ, ಆರ್ಷೇಯವಾಗಿರುವ ತತ್ತ್ವಗಳೇ ಆಧಾರ. ಹೊಸದಾದ ಯುಕ್ತಿಗಳಿಂದ, ರೀತಿಗಳಿಂದ, ಪ್ರಯತ್ನಗಳಿಂದ, ಈ ತತ್ತ್ವಗಳನ್ನು ಅನುಷ್ಠಾನಗೊಳಿಸುವುದೇ ಧರ್ಮ. ಅಂದರೆ, ಸನಾತನಧರ್ಮ, ಸಂಸ್ಕೃತಿ, ಪ್ರಸ್ಥಾನತ್ರಯಗಳು, ವೇದ ಉಪನಿಷತ್ತುಗಳು – ಇವೆಲ್ಲಾ ಋಷಿವರೇಣ್ಯರಿಂದ ನಮಗೆ ವರವಾಗಿ ದೊರೆತಿವೆ. ಇವುಗಳೇ ಪಾರಮಾರ್ಥಕ್ಕೆ, ಮೋಕ್ಷಕ್ಕೆ ಆಧಾರವಾಗಿರುವ ತತ್ತ್ವಗಳು. ಇವುಗಳೊಡನೆ ಆಧುನಿಕ ವಿಜ್ಞಾನ ಮತ್ತು ಕಲೆಗಳು (ಸಂಗೀತ, ನೃತ್ಯ, ಚಿತ್ರಕಲೆ, ಅಭಿನಯ, ಮಾತುಗಾರಿಕೆ) ಯುಕ್ತವಾಗಿ ಸೇರಿಕೊಂಡರೆ ಜನಜೀವನಕ್ಕೆ ಶ್ರೇಯಸ್ಸು ದೊರಕುತ್ತದೆ.

### ಗೌರವಿಸು ಜೀವನವ, ಗೌರವಿಸು ಚೇತನವ

**ಗೌರವಿಸು ಜೀವನವ ಗೌರವಿಸು ಚೇತನವ**
**ಆರದೋ ಜಗವೆಂದು ಭೇದವೆಣಿಸದಿರು**
**ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ**
**ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ**

ಏನು ನನ್ನ ಬಾಳೋ? ಏನಿದರ ಗೋಳೋ? ಹಾಳು ಜಗತ್ತು ಎಂದು ತುಚ್ಛವಾಗಿ ಕಾಣದೆ ನಮ್ಮ ಜೀವನವನ್ನು, ಬದುಕನ್ನು ಗೌರವಿಸಬೇಕು. 'ಸತ್ತ್ವದ ಅವಿಚ್ಛಿನ್ನ ಝರಿ'ಯಂತೆ ಅಂತರಂಗದಲ್ಲಿ ಇರುವ ಚೇತನವನ್ನು ಗೌರವಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಸುಪ್ತದೈವವೇ ಆಗಿದ್ದಾನೆ ಎಂಬ ಸ್ವಾಮಿ ವಿವೇಕಾನಂದರ ಮಾತು ಇಲ್ಲಿ ಸ್ಮರಣೀಯ. ಯಾರದೋ ಜಗತ್ತು ಇದು ಎಂಬ ಭಾವನೆ ಬೇಡ. ಜೀವನದ, ಅಂದರೆ, ವೈಯಕ್ತಿಕ ಹಾಗೂ ಸಮಾಜದ ಸಮೃದ್ಧಿಗೆ, ಸರ್ವತೋಮುಖವಾದ ಬೆಳವಣಿಗೆಗೆ ಹೋರಾಡುವುದೇ, ಶ್ರಮಪಡುವುದೇ ನಿನ್ನ ಆತ್ಮದ ಉನ್ನತಿಗೆ ದಾರಿ.

### ಮಾನುಷಸಖನ ಕೋರುವುದು ಬಡಜೀವ

**ಕಾರಿರುಳೊಳಾಗಸದಿ ತಾರೆ ನೂರಿದ್ದೇನು**
**ದಾರಿಗನ ಕಣ್ಗೆ ಬೇಕೊಂದು ಮನೆಬೆಳಕು**
**ದೂರದಾ ದೈವವಂತಿರಲಿ ಮಾನುಷಸಖನ**
**ಕೋರುವುದು ಬಡಜೀವ – ಮಂಕುತಿಮ್ಮ**

ಬಹಳ ಕತ್ತಲೆ ಇರುವ ರಾತ್ರಿಯ ಸಮಯದ ಆಗಸದಲ್ಲಿ ನೂರಾರು ನಕ್ಷತ್ರಗಳು ಇದ್ದೂ ಏನು ಪ್ರಯೋಜನ? ನಕ್ಷತ್ರ ಗಳಿಂದ ಹೊರಸೂಸುವ ಬೆಳಕಿನ ಕಿರಣಗಳು ಬಹು ತೀಕ್ಷ್ಣವಾಗಿವೆ. ಆದರೂ, ಆ ಕತ್ತಲೆಯಲ್ಲಿ ನಡೆಯುತ್ತಿರುವ ಒಬ್ಬ ದಾರಿಗನಿಗೆ ಇವುಗಳಿಂದ ಧೈರ್ಯ ಬರುವುದಿಲ್ಲ, ಹೆದರಿಕೆಯಿಂದ ಕಂಗಾಲಾಗಿದ್ದಾನೆ. ಬಹಳ ಕಡಿಮೆ ಬೆಳಕನ್ನು ಕೊಡುವ ಮನೆಯೊಂದರಿಂದ ಬರುವ ಬೆಳಕು ಅವನಿಗೆ ಆತ್ಮರಕ್ಷಣೆಯ ಭರವಸೆ ನೀಡುತ್ತದೆ. ನಕ್ಷತ್ರದ ಕಡೆ ಗಮನಿಸದೆ ಮನೆಯ ಬೆಳಕಿನ ಕಡೆಗೆ ಅವನು ಓಡುತ್ತಾನೆ. ಹಾಗೆಯೇ, ದೂರದಲ್ಲಿ ಅತಿ ಶಕ್ತಿಶಾಲಿಯಾದ ಭಗವಂತನಿದ್ದರೂ, ಹತ್ತಿರದ ಮನುಷ್ಯನ (ಸಖ್ಯ) ಗೆಳೆತನವನ್ನು, ಅವನಿಂದ ಸಹಾಯವನ್ನು ಒಬ್ಬ ಬಡವ (ಕಷ್ಟದಲ್ಲಿರುವವನು) ಬಯಸುತ್ತಾನೆ. ಆದ್ದರಿಂದ ದೇವರು ಕಾಪಾಡುತ್ತಾನೆ ಎಂಬ ನಂಬಿಕೆಗಿಂತ ಹೆಚ್ಚಾಗಿ ನಾವು ಇತರರ ನೆರವಿಗೆ, ಸೇವೆಗೆ ಧಾವಿಸಬೇಕು. "ದರಿದ್ರರು, ನಿರಕ್ಷರಕುಕ್ಷಿಗಳು ನಿಮ್ಮ ದೇವರಾಗಲಿ" ಎಂಬ ಸ್ವಾಮಿ ವಿವೇಕಾನಂದರ ಸೂಕ್ತಿ ಇಲ್ಲಿ ಪ್ರಸ್ತುತ.